# ಕರ್ನಾಟಕ ಸರ್ಕಾರ

ನಂ. ಕಂಇ 197 ಭೂದಾಸ 2008

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ, ಬೆಂಗಳೂರು.
ದಿನಾಂಕ 18.8.2008.

## ಸುತ್ತೋಲೆ

ವಿಷಯ: ತಾಲ್ಲೂಕು ಕಛೇರಿಗಳಲ್ಲಿ ಬಾಕಿ ಇರುವ ದರಖಾಸ್ತು ಪೋಡಿ ಕಡತಗಳ ಅಳತೆಗೆ ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳುವ ಬಗ್ಗೆ.

*****

ಭೂಮಾಪನ ಇಲಾಖೆಯ ಪ್ರಮುಖ ಜವಾಬ್ದಾರಿಗಳಲ್ಲಿ ವಿವಿಧ ಪೋಡಿ ಕಡತಗಳು ಅಂದರೆ ದರಖಾಸ್ತು, ಅನ್ಯಕ್ರಾಂತ, ಮ್ಯುಟೇಷನ್ ಮತ್ತು ಭೂಸುಧಾರಣೆಗಳ ವಿಲೇವಾರಿ ಮುಖ್ಯವಾಗಿರುತ್ತದೆ. ಇಲಾಖೆಯಲ್ಲಿ ಭೂಮಾಪಕರ ಕೊರತೆಯಿಂದ ಪೋಡಿ ಕಡತಗಳ ವಿಲೇವಾರಿಯಲ್ಲಿ ಕುಂಠಿತವಾಗಿದ್ದು, ಸದರಿ ವಿಷಯವು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಪೋಡಿ ಕಡತಗಳಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿರುವಂತಹದ್ದು ಮ್ಯುಟೇಷನ್‌ಗೆ ಸಂಬಂಧಿಸಿದ್ದು, ಸದರಿ ಮ್ಯುಟೇಷನ್ ಪ್ರಕರಣಗಳಲ್ಲಿ ಉದ್ಭವಿಸಬಹುದಾದಂತಹ ತೊಂದರೆಗಳನ್ನು ನಿವಾರಿಸಲು ಪರವಾನಗಿ ಭೂಮಾಪಕರ ಯೋಜನೆಯನ್ನು ಸರ್ಕಾರ ಜಾರಿಗೆ ತಂದಿರುತ್ತದೆ. ಈ ಯೋಜನೆಯಡಿಯಲ್ಲಿ ಕೆಲಸ ನಿರ್ವಹಿಸಲು ಈಗಾಗಲೇ 1,600 ಅರ್ಹ ಅಭ್ಯರ್ಥಿಗಳಿಗೆ ಪರವಾನಗಿ ನೀಡಲಾಗಿದೆ. ಇನ್ನು ಹೆಚ್ಚುವರಿಯಾಗಿ 1,500 ಅಭ್ಯರ್ಥಿಗಳಿಗೆ ಪರವಾನಗಿ ನೀಡುವ ಪ್ರಕ್ರಿಯೆ ನಡೆಯುತ್ತಿದ್ದು, ಸೆಪ್ಟೆಂಬರ್ ಅಂತ್ಯಕ್ಕೆ ಸುಮಾರು 3,100 ಪರವಾನಗಿ ಭೂಮಾಪಕರು ಲಭ್ಯವಿರುತ್ತಾರೆ.

ಪರವಾನಗಿ ಭೂಮಾಪಕರಿಗೆ ಈಗ ವಹಿಸಿಕೊಡಲಾದ 11ಇ ಪ್ರಕರಣಗಳಲ್ಲದೇ ಹೆಚ್ಚುವರಿಯಾಗಿ ಹದ್ದುಬಸ್ತು ಪ್ರಕರಣಗಳನ್ನು ಅವರಿಗೆ ವಹಿಸಿಕೊಡುವ ಬಗ್ಗೆ ಪರಿಶೀಲನೆ ನಡೆಯುತ್ತಿದೆ. ಇದಲ್ಲದೆ ರಾಜ್ಯದಲ್ಲಿ ಈಗಾಗಲೇ ಬಾಕಿ ಇರುವ ಸುಮಾರು 25 ಲಕ್ಷ ಮ್ಯುಟೇಷನ್ ಪ್ರಕರಣಗಳನ್ನು ಸಹ ಪರವಾನಗಿ ಭೂಮಾಪಕರಿಗೆ ನೀಡುವ ಬಗ್ಗೆ ಸರ್ಕಾರವು ತೀರ್ಮಾನಿಸಿದೆ. ಇದರಿಂದ ಸರ್ಕಾರಿ ಭೂಮಾಪಕರಿಗೆ ಕೆಲಸದ ಒತ್ತಡ ಕಡಿಮೆಯಾಗಿ ಪರವಾನಗಿ ಭೂಮಾಪಕರಿಗೆ ಪೋಡಿ ಕಡತಗಳ ವಿಲೇವಾರಿ ಬಗ್ಗೆ ಜವಾಬ್ದಾರಿ ಹೆಚ್ಚಿದಂತಾಗುತ್ತದೆ. ಸರ್ಕಾರವು ಅನ್ಯ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಭೂಮಾಪಕರನ್ನು ಮಾತೃ ಇಲಾಖೆಗೆ ಈಗಾಗಲೇ ಹಿಂದಕ್ಕೆ ಪಡೆದಿದ್ದು, ಇನ್ನು ಮುಂದೆ ಸರ್ಕಾರಿ ಭೂಮಾಪಕರು ಸರ್ಕಾರಿ ಜಮೀನಿಗೆ ಸಂಬಂಧಿಸಿದ ಅಳತೆ, ಕೆಲಸಗಳನ್ನು ಮಾತ್ರ ಮಾಡಲು ಸರ್ಕಾರಿ ಸುತ್ತೋಲೆ ಸಂಖ್ಯೆ: ಕಂಇ 134 ಭೂದಾಸ 2008 ದಿನಾಂಕ 26.6.2008 ರಲ್ಲಿ ಸೂಚನೆಗಳನ್ನು ನೀಡಲಾಗಿದೆ.

ಇದಲ್ಲದೆ ಸರ್ಕಾರವು ಭೂರಹಿತರಿಗೆ ವಿವಿಧ ಯೋಜನೆಗಳ ಅಡಿಯಲ್ಲಿ ಜಮೀನು ಮಂಜೂರು ಮಾಡುತ್ತಿದ್ದು, ಅಂತಹ ಹಲವಾರು ಪ್ರಕರಣಗಳು ಅಳತೆಯಾಗದೇ ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಭೂ ಮಂಜೂರಾತಿ ಕಾರ್ಯವಿಧಾನದಂತೆ ಭೂಮಂಜೂರಾತಿ ಮಾಡುವ ಪೂರ್ವಭಾವಿಯಾಗಿ ಇಲಾಖಾ ಭೂಮಾಪಕರು ಅಳತೆ ಮಾಡಲು ಅವಕಾಶವಿದ್ದರೂ ಸಹ ಕಾರಣಾಂತರಗಳಿಂದ ಕ್ರಮ ಜರುಗಿಸದೇ ಜಮೀನು ಮಂಜೂರು ಮಾಡುತ್ತಿದ್ದು, ಅಳತೆಗೆ ತಾಲ್ಲೂಕು ಕಛೇರಿಯಲ್ಲಿ ಬಾಕಿ ಇರುತ್ತದೆ. ಇಂತಹ ದರಖಾಸ್ತು ಕಡತಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಮಂಜೂರಿದಾರರು ಜಮೀನನ್ನು ಪರಭಾರೆ ಮಾಡಲು ಉದ್ದೇಶಿಸಿ 11ಇ ನಕ್ಷೆಗೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಮೂಲ ದರಖಾಸ್ತು ಕಡತದ ಅಳತೆ ಕಾರ್ಯ ನಡೆಯದೇ ಇರುವುದರಿಂದ, 11ಇ ನಕ್ಷೆ ತಯಾರಿಸಲು ಅವಕಾಶವಾಗುವುದಿಲ್ಲ. ಕಾರಣ,

1. ಮೂಲ ಮಂಜೂರಿ ವಿಸ್ತೀರ್ಣಕ್ಕೂ ಹಾಗೂ ಅನುಭವದ ವಿಸ್ತೀರ್ಣಕ್ಕೂ ವ್ಯತ್ಯಾಸಗಳು ಇರುವ ಸಂಭವ ಇರುತ್ತದೆ.
2. ಮಂಜೂರಿಯಾದ ಸರ್ವೆ ನಂಬರಿನಲ್ಲಿ ಅನುಭವ ಇಲ್ಲದೇ ಬೇರೆ ಸರ್ವೆ ನಂಬರಿನಲ್ಲಿ ಅನುಭವ ಇರುವ ಸಂಭವ ಇರುತ್ತದೆ.
3. ಮಂಜೂರಿಯಾದ ಸರ್ವೆ ನಂಬರಿನಲ್ಲಿ ಸ್ಥಳ ಬದಲಾವಣೆ.
4. ಮಂಜೂರಿಯಾದರೂ ಮಂಜೂರಿದಾರರಿಗೆ ಎಲ್ಲೂ ಅನುಭವ ಇರುವುದಿಲ್ಲ.
5. ಒಂದು ಸರ್ವೆ ನಂಬರಿನಲ್ಲಿ ಜಮೀನು ಲಭ್ಯವಿರುವುದಕ್ಕಿಂತ ಹೆಚ್ಚುವರಿ ವಿಸ್ತೀರ್ಣ ಮಂಜೂರಿಯಾಗಿರುವುದು.

ಮೇಲೆ ತಿಳಿಸಿರುವ ಎಲ್ಲಾ ನ್ಯೂನ್ಯತೆಗಳನ್ನು ಸರಿಪಡಿಸಿದ ನಂತರ ದರಖಾಸ್ತು ಕಡತದ ದುರಸ್ತಿ ಕೆಲಸ ಮಾಡಬೇಕಾಗಿರುತ್ತದೆ. ಅನಂತರ ಅಪೇಕ್ಷಿತ 11ಇ ನಕ್ಷೆ ತಯಾರಿಸಲು ಅವಕಾಶವಾಗುತ್ತದೆ. ಆದ್ದರಿಂದ ಇಂತಹ ಪ್ರಕರಣಗಳಲ್ಲಿ 11ಇ ನಕ್ಷೆ ತಯಾರಿಸಲು ಹೆಚ್ಚು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ದರಖಾಸ್ತು ಜಮೀನುಗಳಿಗೆ ಸಂಬಂಧಿಸಿದಂತೆ ಅರ್ಜಿಗಳು ಬಂದಾಗ ಅಂತಹ ಪ್ರಕರಣಗಳಲ್ಲಿ ಮಾತ್ರ ಅಳತೆ ಕಾರ್ಯ ನೆರವೇರಿಸಿ, 11ಇ ನಕ್ಷೆ ಒದಗಿಸಿ ಉಳಿಕೆ ಪ್ರಕರಣಗಳನ್ನು ಅಳತೆ ಮಾಡದೇ ಇರುವುದು ಸಮಂಜಸವಾದ ಕ್ರಮವಲ್ಲ ಎಂದು ಸರ್ಕಾರ ಪರಿಗಣಿಸಿ ತಾಲ್ಲೂಕು ಕಛೇರಿಗಳಲ್ಲಿ ಬಾಕಿ ಇರುವ ಎಲ್ಲಾ ದರಖಾಸ್ತು ಕಡತಗಳ ಅಳತೆ ಕಾರ್ಯವನ್ನು ಒಂದು ವಿಶೇಷ ಕಾರ್ಯಕ್ರಮದಡಿಯಲ್ಲಿ ನೆರವೇರಿಸಿ ಎಲ್ಲಾ ಪಹಣಿ ಮತ್ತು ಸರ್ವೆ ದಾಖಲೆಗಳನ್ನು ಇಂಡೀಕರಣಗೊಳಿಸುವ ಬಗ್ಗೆ ತೀರ್ಮಾನಿಸಿದೆ.

ಇದರನ್ವಯ ಈಗಾಗಲೇ ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕಿನಲ್ಲಿ ಎಲ್ಲಾ ದರಖಾಸ್ತು ಕಡತಗಳ ಅಳತೆ ಮತ್ತು ದುರಸ್ತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು ಸದರಿ ತಾಲ್ಲೂಕಿನಲ್ಲಿ ಒಟ್ಟು 4 ಹೋಬಳಿಗಳ ಪೈಕಿ 333 ದರಖಾಸ್ತು ಕಡತಗಳು ಬಾಕಿ ಇದ್ದು, ಅವುಗಳಲ್ಲಿ 2,684 ಸರ್ವೆ ನಂಬರುಗಳು ಒಳಗೊಂಡಿರುತ್ತದೆ. ಈ ಕೆಲಸಕ್ಕಾಗಿ ಸದರಿ ತಾಲ್ಲೂಕಿನಲ್ಲಿ ಒಟ್ಟು 14 ಭೂಮಾಪಕರ ವಿಶೇಷ ತಂಡವನ್ನು ರಚಿಸಿದ್ದು, (ಅವುಗಳಲ್ಲಿ 10 ಜನ ಭೂಮಾಪಕರನ್ನು ಬಾಜು ತಾಲ್ಲೂಕಿನಿಂದ ವಿಶೇಷವಾಗಿ ನಿಯೋಜಿಸಲಾಗಿದೆ) ಈ ಎಲ್ಲಾ ಕಾರ್ಯವನ್ನು ಮಾರ್ಚ್-2008 ರಂದು ಪ್ರಾರಂಭಿಸಿದ್ದು, ಜುಲೈ-2008 ರ ಅಂತ್ಯಕ್ಕೆ ಎಲ್ಲಾ ದರಖಾಸ್ತು ಕಡತಗಳ ಅಳತೆ ಕಾರ್ಯ ಪೂರೈಸಿ ದಾಖಲೆಗಳಲ್ಲಿ ಇಂಡೀಕರಣಗೊಳಿಸುವ ಹಂತ ತಲುಪಿರುತ್ತದೆ.

ಈ ವಿಶೇಷ ಕಾರ್ಯಕ್ರಮದಿಂದಾಗಿ ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕಿನಲ್ಲಿ ಬಾಕಿ ಇರುವ ಎಲ್ಲಾ ದರಖಾಸ್ತು ಕಡತಗಳು ಅಳತೆಯಾಗಿ, ಮುಂದೆ ಬರುವಂತಹ 11ಇ ನಕ್ಷೆಗಳ ಬೇಡಿಕೆ ಬಗ್ಗೆ ಯಾವುದೇ ಕಾಲ ವಿಳಂಬವಿಲ್ಲದೇ ಕ್ರಮ ಜರುಗಿಸಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಈ ಕ್ರಮದಿಂದ ಬಡ ರೈತರಿಗೆ ಅನುಕೂಲವಾಗಿರುವುದನ್ನು ಸರ್ಕಾರ ಮನಗಂಡು, ಇಂತಹ ವಿಶೇಷ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಇತರೆ ಜಿಲ್ಲೆಗಳಲ್ಲೂ ಸಹ ಹಮ್ಮಿಕೊಳ್ಳಲು ನಿರ್ಧರಿಸಿ ಈ ಕೆಳಗಿನಂತೆ ಸೂಚನೆಗಳನ್ನು ನೀಡಿದೆ.

1. ರಾಜ್ಯದ ಪ್ರತಿಯೊಂದು ಉಪವಿಭಾಗದಲ್ಲಿ ಒಂದು ತಾಲ್ಲೂಕನ್ನು ಉಪವಿಭಾಗಾಧಿಕಾರಿಗಳು ಆರಿಸಿಕೊಂಡು ದರಖಾಸ್ತು ಕಡತಗಳ ವಿಲೇವಾರಿಗೆ ವಿಶೇಷ ಆಂದೋಲನವನ್ನು ಪ್ರಾರಂಭಿಸುವುದು ಮತ್ತು ಉಪವಿಭಾಗಾಧಿಕಾರಿಗಳು ಸದರಿ ಯೋಜನೆಗೆ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸತಕ್ಕದ್ದು.
2. ಸದರಿ ತಾಲ್ಲೂಕಿನ ಎಲ್ಲಾ ದರಖಾಸ್ತು ಕಡತಗಳನ್ನು ಒಟ್ಟುಗೂಡಿಸಿ ಅವುಗಳ ಪಟ್ಟಿ ತಯಾರಿಸಿ ಕಡತಗಳನ್ನು ಗ್ರಾಮವಾರು ವಿಂಗಡಿಸುವುದು.

3. ಪ್ರತಿ ತಾಲ್ಲೂಕಿನಲ್ಲಿ ಕನಿಷ್ಠ 10 ಭೂಮಾಪಕರ ವಿಶೇಷ ತಂಡವನ್ನು ರಚಿಸಿ ಈ ಕಾರ್ಯಕ್ರಮವನ್ನು ರೂಪಿಸುವುದು.
4. ತಾಲ್ಲೂಕಿನಲ್ಲಿ ಲಭ್ಯವಿರುವ ಭೂಮಾಪಕರ ಪೈಕಿ ಕನಿಷ್ಠ ಭೂಮಾಪಕರ ಸಂಖ್ಯೆಯನ್ನು ದೈನಂದಿನ ಕಾರ್ಯಕ್ರಮಗಳಾದ ದಾಖಲೆ ಕೋರಿಕೆ ನಿರ್ವಹಣೆ, 11ಇ ನಕ್ಷೆ ಪರಿಶೀಲನೆ ಮುಂತಾದವುಗಳಿಗೆ ನಿಯೋಜಿಸಿ, ಉಳಿಕೆ ಭೂಮಾಪಕರುಗಳನ್ನು ಈ ವಿಶೇಷ ಕಾರ್ಯಕ್ರಮಕ್ಕಾಗಿ ನಿಯೋಜಿಸುವುದು.
5. ವಿಶೇಷ ತಂಡ ರಚನೆಗೆ ಭೂಮಾಪಕರ ಕೊರತೆ ಉದ್ಭವಿಸಿದ್ದಲ್ಲಿ ಬಾಜು ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜಿಸುವುದು.
6. ಈ ವಿಶೇಷ ಕಾರ್ಯಕ್ರಮಕ್ಕೆ ಉಪವಿಭಾಗದಲ್ಲಿ ಕೆಲಸ ಮಾಡುತ್ತಿರುವ ಪರ್ಯಾವೇಕ್ಷಕರ ಪೈಕಿ ಒಬ್ಬರನ್ನು ಪೂರ್ಣ ಪ್ರಮಾಣದಲ್ಲಿ ನೇಮಿಸುವುದು. ಸದರಿ ಪರ್ಯಾವೇಕ್ಷಕರು ಈ ಯೋಜನೆಯ ತಾಂತ್ರಿಕ ವಿಷಯಗಳ ಉಸ್ತುವಾರಿಯಾಗಿ ಕೆಲಸ ನಿರ್ವಹಿಸಲು ಸೂಚಿಸುವುದು.
7. ವಿಶೇಷ ಕಾರ್ಯಕ್ರಮದಲ್ಲಿ ಅಳತೆ ಮಾಡುವಾಗ ಉದ್ಭವಿಸುವಂತಹ ತೊಡಕುಗಳಿಗೆ ಅಗತ್ಯವಿರುವ ಆದೇಶಗಳನ್ನು ಸಹಾಯಕ ಆಯುಕ್ತರು ಮತ್ತು ಜಿಲ್ಲಾಧಿಕಾರಿಗಳವರು ತಹಶೀಲ್ದಾರ್ ರವರಿಗೆ ನೀಡುವುದು.
8. ಈ ವಿಶೇಷ ಕಾರ್ಯಕ್ರಮದಂತೆ ಒಂದು ತಾಲ್ಲೂಕಿನಲ್ಲಿ ಕೆಲಸ ಮುಗಿದ ನಂತರ ಆ ಉಪವಿಭಾಗದಲ್ಲಿ ಇನ್ನೊಂದು ತಾಲ್ಲೂಕಿಗೆ ಈ ಕಾರ್ಯಕ್ರಮ ವಿಸ್ತರಿಸಿ ಮೇಲೆ ತಿಳಿಸಿದ ಪದ್ಧತಿ ಅನುಸರಿಸಿ ಹಾಗೂ ಉಪವಿಭಾಗದ ಎಲ್ಲಾ ತಾಲ್ಲೂಕುಗಳಲ್ಲಿ ಕೆಲಸ ಮುಗಿಯುವವರೆಗೂ ಕಾರ್ಯಕ್ರಮ ಜಾರಿಗೊಳಿಸುವುದು.
9. ಈ ಕಾರ್ಯಕ್ರಮದಲ್ಲಿನ ಕೆಲಸಗಳ ಪರಿಶೀಲನೆಯನ್ನು ಜಿಲ್ಲೆಯ ಭೂದಾಖಲೆಗಳ ಉಪ ನಿರ್ದೇಶಕರು ಹಾಗೂ ಅವರ ಕಛೇರಿಯಲ್ಲಿ ಕೆಲಸ ಮಾಡುವ ಅಧೀಕ್ಷಕರು (ತಾಂ) ರವರು ಕಾಲಕಾಲಕ್ಕೆ ಪರಿಶೀಲಿಸಿ ತಹಶೀಲ್ದಾರ್‌ರವರಿಗೆ ಸಲಹೆ ಮತ್ತು ಸೂಚನೆಗಳನ್ನು ನೀಡುವುದು.
10. ತಹಶೀಲ್ದಾರ್‌ರವರು ಈ ವಿಶೇಷ ಕಾರ್ಯಕ್ರಮದ ಪ್ರಗತಿಯ ಬಗ್ಗೆ ವರದಿಯನ್ನು ಪ್ರತಿ ಮಾಹೆ ಕನೇ ತಾರೀಖಿನೊಳಗಾಗಿ ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ ಮತ್ತು ಸರ್ಕಾರಕ್ಕೆ ಸಲ್ಲಿಸುವುದು.
11. ಆಯುಕ್ತರು ಈ ಪ್ರಗತಿ ಪಟ್ಟಿಯನ್ನು ಪುನರ್ ವಿಮರ್ಶಿಸಿ ಸರ್ಕಾರಕ್ಕೆ ವಿಶೇಷ ವರದಿಯನ್ನು ಸಲ್ಲಿಸುವುದು.
12. ಈ ಎಲ್ಲಾ ಕಾರ್ಯಕ್ರಮವನ್ನು ಒಂದು ಕಾಲಮಿತಿಯೊಳಗೆ ಪೂರೈಸುವ ಬಗ್ಗೆ ಪ್ರತಿಯೊಬ್ಬ ಉಪವಿಭಾಗಾಧಿಕಾರಿಗಳು, ಅವರ ವ್ಯಾಪ್ತಿಯ ಉಪವಿಭಾಗದ ತಾಲ್ಲೂಕುಗಳಲ್ಲಿ ಈ ವಿಶೇಷ ಕಾರ್ಯಕ್ರಮಕ್ಕಾಗಿ ಒಂದು ತಾಲ್ಲೂಕನ್ನು ಆರಿಸಿಕೊಂಡು ಸದರಿ ತಾಲ್ಲೂಕಿನ ಎಲ್ಲಾ ದರಖಾಸ್ತುಗಳನ್ನು ಅಳತೆ ಕೆಲಸದಿಂದ ವಿಲೇವಾರಿಯನ್ನು 4 ತಿಂಗಳೊಳಗೆ ಪೂರೈಸಲು ಕಟ್ಟುನಿಟ್ಟಾಗಿ ಸೂಚಿಸಿದೆ.
13. ಉಪವಿಭಾಗದ ಉಪ ಆಯುಕ್ತರು ಮತ್ತು ತಹಶೀಲ್ದಾರರುಗಳು ಈ ವಿಶೇಷ ಕಾರ್ಯಕ್ರಮಕ್ಕೆ ಆಸಕ್ತಿ ವಹಿಸಿ ಹೆಚ್ಚಿನ ಮಹತ್ವ ಕೊಟ್ಟು ಕಾರ್ಯಕ್ರಮವನ್ನು ರೂಪಿಸುವುದು ಹಾಗು ಯಶಸ್ವಿಯಾಗಿ ಜಾರಿಗೊಳಿಸುವುದು. ತಪ್ಪಿದ್ದಲ್ಲಿ ಅವರ ವಾರ್ಷಿಕ ರಹಸ್ಯ ವರದಿಗಳಲ್ಲಿ ನೇರವಾಗಿ ಸರ್ಕಾರದ ಮಟ್ಟದಲ್ಲಿ ಪ್ರತಿಕೂಲ ಷರಾಗಳನ್ನು ನಮೂದು ಮಾಡಲಾಗುವುದು.
14. ಯಾವ ಜಿಲ್ಲೆಯಲ್ಲಿ ಒಂದು ಉಪವಿಭಾಗ ಮಾತ್ರ ಇರುತ್ತದೆಯೋ ಅಂತಹ ಜಿಲ್ಲೆಯ ಭೂದಾಖಲೆಗಳ ಉಪ ನಿರ್ದೇಶಕರು ವಿಶೇಷ ಕಾರ್ಯಕ್ರಮ ಜಾರಿಗೊಳಿಸುವ ತಾಲ್ಲೂಕಿನಲ್ಲಿ ಪ್ರತೀ ವಾರದಲ್ಲಿ ಕನಿಷ್ಠ 3 ದಿನಗಳ ಪ್ರವಾಸ ಮಾಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿ ಸಂಬಂಧಿಸಿದವರಿಗೆ ಸಲಹೆ ಮತ್ತು ಸೂಚನೆಗಳನ್ನು ನೀಡುವುದು.

ಜಿಲ್ಲೆಯಲ್ಲಿ ಒಂದಕ್ಕಿಂತ ಹೆಚ್ಚು ಉಪವಿಭಾಗಗಳು ಇದ್ದ ಪಕ್ಷದಲ್ಲಿ ಅಂತಹ ಜಿಲ್ಲೆಯ ಭೂದಾಖಲೆಗಳ ಉಪ ನಿರ್ದೇಶಕರು, ವಿಶೇಷ ಕಾರ್ಯಕ್ರಮ ಜಾರಿಗೊಳಿಸಲಾಗುತ್ತಿರುವ

ಉಪವಿಭಾಗದ ಎಲ್ಲಾ ತಾಲ್ಲೂಕುಗಳಲ್ಲಿ ವಾರದಲ್ಲಿ ಕನಿಷ್ಠ 2 ದಿನ (ಪ್ರತಿ ತಾಲ್ಲೂಕು) ಪ್ರವಾಸ ಮಾಡಿ, ಸಂಬಂಧಿಸಿದವರಿಗೆ ಸಲಹೆ ಮತ್ತು ಸೂಚನೆಗಳನ್ನು ನೀಡುವುದು. ಕಾರ್ಯಕ್ರಮ ಯಶಸ್ವಿಗೊಳಿಸಲು ವಿಫಲರಾದಲ್ಲಿ, ಸದರಿ ಭೂದಾಖಲೆಗಳ ಉಪ ನಿರ್ದೇಶಕರವರ ವಾರ್ಷಿಕ ರಹಸ್ಯ ವರದಿಗಳಲ್ಲಿ ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರುರವರಿಂದ ನೇರವಾಗಿ ಪ್ರತಿಕೂಲ ಷರಾಗಳನ್ನು ನಮೂದು ಮಾಡಲಾಗುವುದು.

ಈ ಸುತ್ತೋಲೆಯ ಅಂಶಗಳ ಅನುಪಾಲನೆ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಅನುಪಾಲನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು.

19/8

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಕಂದಾಯ ಇಲಾಖೆ.

**ಪ್ರತಿಯನ್ನು:-**

1. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
2. ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು.
3. ಎಲ್ಲಾ ಜಿಲ್ಲಾಧಿಕಾರಿಗಳು.
4. ಎಲ್ಲಾ ಉಪ ಆಯುಕ್ತರು.
5. ಎಲ್ಲಾ ತಹಶೀಲ್ದಾರ್‌ಗಳು.
6. ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿಗಳು.
7. ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಕಂದಾಯ ಇಲಾಖೆ.
8. ಎಲ್ಲಾ ಭೂದಾಖಲೆಗಳ ಜಂಟಿ ನಿರ್ದೇಶಕರು, ದಕ್ಷಿಣ ವಲಯ / ಮೈಸೂರು / ಉತ್ತರ ವಲಯ / ಬೆಳಗಾಂ.
9. ಸರ್ಕಾರದ ಉಪ ಕಾರ್ಯದರ್ಶಿ (ಭೂಮಾಪನ / ಭೂಸ್ವಾಧೀನ) ಕಂದಾಯ ಇಲಾಖೆ ರವರ ಆಪ್ತ ಸಹಾಯಕರು.
10. ಎಲ್ಲಾ ಭೂದಾಖಲೆಗಳ ಉಪ ನಿರ್ದೇಶಕರು, ಜಿಲ್ಲಾಧಿಕಾರಿಗಳ ಕಛೇರಿ.
11. ಎಲ್ಲಾ ಭೂದಾಖಲೆಗಳ ಸಹಾಯಕ ನಿರ್ದೇಶಕರು (ಭೂ.ನಿ)
12. ಕಾ.ರ.ಕ. / ಹೆಚ್ಚುವರಿ ಪ್ರತಿ.